DFA/995522

## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 581

ಸದಸ್ಯರ ಹೆಸರು : ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರಿಸಬೇಕಾದ ಸಚಿವರು : ಮಾನ್ಯ ಸಾರಿಗೆ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು

ಉತ್ತರಿಸಬೇಕಾದ ದಿನಾಂಕ : 23-12-2022

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಅನ್ಯ ರಾಜ್ಯದಲ್ಲಿ ನೋಂದಣಿಯಾಗಿ ರಾಜ್ಯದಲ್ಲಿ ಸೂಕ್ತ ತೆರಿಗೆ ಪಾವತಿಸದೆ ಸಂಚರಿಸುತ್ತಿರುವ ವಾಹನಗಳ ಸಂಖ್ಯೆ ಎಷ್ಟು; ಅನ್ಯ ರಾಜ್ಯದಲ್ಲಿ ನೋಂದಣಿಯಾಗಿರುವ ವಾಹನಗಳು ನಮ್ಮ ರಾಜ್ಯದಲ್ಲಿ ಮರು ನೋಂದಣಿಯಾಗದೆ ಎಷ್ಟು ಅವಧಿಯವರೆಗೆ ಸಂಚರಿಸಬಹುದು (ವಿವರ ನೀಡುವುದು) | ಅನ್ಯ ರಾಜ್ಯದಲ್ಲಿ ನೋಂದಣಿಯಾಗಿ ಸೂಕ್ತ ತೆರಿಗೆ ಪಾವತಿಸದೆ ಸಂಚರಿಸುತ್ತಿರುವ ವಾಹನಗಳ ಮಾಹಿತಿಯು ಲಭ್ಯವಿರುವುದಿಲ್ಲ.<br><br>ಮೋಟಾರು ವಾಹನ ಕಾಯ್ದೆ 1988ರ ಕಲಂ 47ರ ಪ್ರಕಾರ ಅನ್ಯ ರಾಜ್ಯದಲ್ಲಿ ನೋಂದಣಿಯಾಗಿರುವ ವಾಹನಗಳು ನಮ್ಮ ರಾಜ್ಯದಲ್ಲಿ 12 ತಿಂಗಳವರೆಗೆ ಸಂಚರಿಸಲು ಅವಕಾಶವಿದೆ. |
| ಆ | ರಾಜ್ಯದಲ್ಲಿ ರಸ್ತೆ ತೆರಿಗೆ ಪಾವತಿಸದೆ ಅನ್ಯ ರಾಜ್ಯದಲ್ಲಿ ನೋಂದಣಿಯಾದ ವಾಹನಗಳ ಪತ್ತೆಗೆ ಸರ್ಕಾರ ಕೈಗೊಂಡ ಕ್ರಮಗಳೇನು; ಅಕ್ರಮವಾಗಿ ಸಂಚರಿಸುತ್ತಿರುವ ನಾಲ್ಕು ಚಕ್ರದ ವಾಹನ ಹಾಗೂ ದ್ವಿಚಕ್ರ ವಾಹನಗಳ ಪತ್ತೆಗೆ ಕೈಗೊಂಡ ಕ್ರಮಗಳೇನು (ವಿವರ ನೀಡುವುದು). | ಸಾರಿಗೆ ಇಲಾಖೆಯಿಂದ ನಿರಂತರವಾಗಿ ಪ್ರವರ್ತನ ಚಟುವಟಿಕೆಗಳನ್ನು ನಡೆಸಲಾಗುತ್ತಿದೆ. ಈ ಸಂದರ್ಭದಲ್ಲಿ ರಾಜ್ಯದಲ್ಲಿ ರಸ್ತೆ ತೆರಿಗೆ ಪಾವತಿಸದೆ ಅನ್ಯ ರಾಜ್ಯದಲ್ಲಿ ನೋಂದಣಿಯಾದ ವಾಹನಗಳನ್ನು ಸಹ ಪರೀಕ್ಷೆಗೆ ಒಳಪಡಿಸಿ, ಮೋಟಾರು ವಾಹನಗಳ ಕಾಯ್ದೆ 1988ರ ಕಲಂ 47ರಡಿ 12 ತಿಂಗಳು ಮೀರಿ ಸಂಚರಿಸುತ್ತಿರುವ ಅನ್ಯ ರಾಜ್ಯದ ವಾಹನಗಳ ದಾಖಲೆಗಳನ್ನು ಪರಿಶೀಲಿಸಿ ನಿಯಮಾನುಸಾರ ಕ್ರಮ ಜರುಗಿಸಲಾಗುತ್ತಿದೆ. |
| ಇ | ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿನ ಬಹುಮಹಡಿ ವಸತಿ ಕಟ್ಟಡಗಳ ವಾಹನ ನಿಲುಗಡೆ ನಿರ್ವಹಣಾ ನೋಂದಣಿ ವಹಿ (ಡಿಜಿಟಲ್ ಅಥವಾ ಲಿಖಿತ) ಪರಿಶೀಲಿಸಿದ್ದಲ್ಲಿ, ಅನ್ಯ ರಾಜ್ಯಗಳಲ್ಲಿ ನೋಂದಣಿಯಾಗಿ ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿ ರಸ್ತೆ ತೆರಿಗೆ ವಂಚಿಸಿ ಸಂಚರಿಸುತ್ತಿರುವ ಐಷಾರಾಮಿ ಕಾರುಗಳು ಯಾವ ದಿನಾಂಕದಿಂದ ಸಂಬಂಧಿಸಿದ ಬಹುಮಹಡಿ ವಸತಿ ಕಟ್ಟಡಗಳ ವಾಹನ ನಿಲುಗಡೆ ನಿರ್ವಹಣಾ ವಹಿಯಲ್ಲಿ ನೋಂದಣಿಯಾಗಿವೆ ಎಂಬುದು ಪತ್ತೆಯಾಗಬಹುದಾಗಿದ್ದು ಬಹುಮಹಡಿ ವಸತಿ ಕಟ್ಟಡಗಳ ವಾಹನ ನಿಲುಗಡೆ ನಿರ್ವಹಣಾ ವಹಿಯನ್ನು ಪರಿಶೀಲಿಸುವ ಕುರಿತು ಸರ್ಕಾರದ ನಿಲುವೇನು; ನೂರಾರು ಕೋಟಿ ರೂ.ಗಳು ಸರ್ಕಾರದ ಬೊಕ್ಕಸಕ್ಕೆ ಆದಾಯ ಬರಬಹುದಾದ ಈ ಪರಿಶೀಲನಾ ವ್ಯವಸ್ಥೆಯನ್ನು ಎಂದಿನಿಂದ ಪ್ರಾರಂಭಿಸಲಾಗುವುದು? (ವಿವರ ನೀಡುವುದು) | ಮೋಟಾರು ವಾಹನಗಳ ಕಾಯ್ದೆ ಮತ್ತು ನಿಯಮಗಳಡಿಯಲ್ಲಿ ಸಾರ್ವಜನಿಕ ರಸ್ತೆಗಳಲ್ಲಿ ವಾಹನಗಳು ಸಂಚರಿಸುವ ಸಂದರ್ಭದಲ್ಲಿ ಮಾತ್ರ ಅವುಗಳನ್ನು ಪರಿಶೀಲಿಸುವ ಕ್ರಮ ಜಾರಿಯಲ್ಲಿದೆ. ವಸತಿ ಕಟ್ಟಡಗಳಲ್ಲಿ ನಿಲುಗಡೆ ಮಾಡಿದ ವಾಹನಗಳನ್ನು ಪ್ರಸ್ತುತ ಕಾಯ್ದೆಯಡಿ ಪರಿಶೀಲಿಸುವ ಅಧಿಕಾರವಿರುವುದಿಲ್ಲ. |

(ಸಹಿ)
ಬಿ. ಶ್ರೀರಾಮುಲು
ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು



Generated from eOffice by B SREERAMULU, TD-MIN(BS), TRANSPORT MINISTER, Trans on 17/12/2022 03:46 PM